**ಸಾಕ್ಷಿಯನ್ನು ದಿಃ 05.10.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಬಿ ಜಿ ಕೆ ವಕೀಲರಿಂದಃ**

ಬೈಕನ್ನು ನನ್ನ ಅಣ್ಣ ಚಲಾಯಿಸುತ್ತಿದ್ದನು. ನಮ್ಮ ಹಿಂಬದಿಯಿಂದ ಬಂದ ಕಾರು ನಮಗೆ ಅಪಘಾತಪಡಿಸಿರುತ್ತದೆ. ರಸ್ತೆಯ ಅಗಲ 15 ಅಡಿ ಇರುತ್ತದೆ. ನಮ್ಮ ಎಡಬದಿಯಲ್ಲಿ ಮೂರು ಅಡಿ ಜಾಗ ಇತ್ತು. ಕಾರಿನ ಮಧ್ಯಭಾಗ ನಮಗೆ ತಾಗಿರುತ್ತದೆ. ನಿಪಿ. 7 ರಲ್ಲಿ ನಮೂದಾಗಿರುವ ವಾಹನದ ಜಖಂಗಳು ಸರಿ ಇರುತ್ತದೆ ಎಂದರೆ ಸರಿ. ಮೊದಲು ನಾನು ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಅಲ್ಲಿಂದ ಭಾನವಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಬೇರೆ ಆಸ್ಪತ್ರೆಗಳಲ್ಲಿ ನಾನು ಚಿಕಿತ್ಸೆ ಪಡೆದಿಲ್ಲ. ನನಗೆ ಚಿಕಿತ್ಸೆ ನೀಡಿದ ವೈದ್ಯರುಗಳ ಹೆಸರು ನೆನಪಿಲ್ಲ. ಅಪೋಲೋ ಆಸ್ಪತ್ರೆಯಲ್ಲಿ ವೈದ್ಯರಿಗೆ ಅಪಘಾತದ ಬಗ್ಗೆ ಏನು ಮಾಹಿತಿ ಕೊಟ್ಟಿದ್ದಾರೆಂದು ನನಗೆ ಗೊತ್ತಾಗಲಿಲ್ಲ. ನನ್ನ ತಲೆ ಹಾಗೂ ಕಾಲಿಗೆ ಪೆಟ್ಟಾಗಿರುತ್ತದೆ. ನನ್ನ ತಲೆಗೆ ಶಸ್ತ್ರಚಿಕಿತ್ಸೆ ಮಾಡಿಲ್ಲ ಎಂದರೆ ಸರಿ. ನಾನು ಹೆಲ್ಮೆಟ್ ಧರಿಸಿದ್ದರೆ ತಲೆಗೆ ಪೆಟ್ಟಾಗುತ್ತಿರಲಿಲ್ಲ ಎಂದರೆ ನಾನು ಹೆಲ್ಮೆಟ್ ಧರಿಸಿದ್ದೆನು. ನಾನು ಹೆಲ್ಮೆಟ್ ಧರಿಸಿದ್ದ ಬಗ್ಗೆ ಪೊಲೀಸ್ ದಾಖಲೆಗಳಲ್ಲಿ ನಮೂದಾಗಿಲ್ಲ ಎಂದರೆ ಸರಿಯಲ್ಲ.

2) ನಾನು ಗಾರೆ ಕೆಲಸ ಮಾಡುತ್ತೇನೆ. ನನಗೆ ಈಗ ತುಂಬಾ ನೋವು ಇರುವ ಕಾರಣ ಗಾರೆ ಕೆಲಸ ಮಾಡಲು ಆಗುತ್ತಿಲ್ಲ. ಅಪಘಾತವಾಗುವ ಮೊದಲು ನಾನು ಗಾರೆ ಕೆಲಸ ಮಾಡುತ್ತಿದ್ದು, ನಂತರದಲ್ಲಿ ನಾನು ಕೆಲಸ ಮಾಡಿಲ್ಲ. ನನ್ನ ದಿನನಿತ್ಯದ ಖರ್ಚುಗಳನ್ನು ನನ್ನ ಅಕ್ಕ ಭಾವ ನೋಡಿಕೊಳ್ಳುತ್ತಾರೆ. ಒಂದು ವರ್ಷದಿಂದ ಅವರೇ ನನ್ನನ್ನು ನೋಡಿಕೊಳ್ಳುತ್ತಿದ್ದಾರೆ. ನನ್ನ ಅಣ್ಣ ವಿಶ್ವನಾಥನಿಗೆ ಅಪಘಾತದಲ್ಲಿ ಸ್ವಲ್ಪ ತರಚಿದ ಗಾಯಗಳಾಗಿತ್ತು, ಅವರೂ ಸಹ ಭಾನವಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.